ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ದಿನಾಂಕ:15.05.2021 ರಂದು ಅಪರಾಹ್ನ 3.00 ಗಂಟೆಗೆ ಮಾನ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಅಧ್ಯಕ್ಷತೆಯಲ್ಲಿ ರಚಿತವಾಗಿರುವ ತಾಂತ್ರಿಕ ಮೌಲ್ಯಮಾಪನ/ಆರ್ಥಿಕ ಮೌಲ್ಯಮಾಪನ ಮತ್ತು ದರಸಂಧಾನ ಸಮಿತಿಯ ಮುಂದೆ ಮುಖ್ಯ ಅಭಯಂತರರು, ರಾಜರಾಜೇಶ್ವರಿನಗರ ವಲಯ ಶಾಖೆಗೆ ಸಂಬಂಧಿಸಿದ ಕಾಮಗಾರಿಯ ಟೆಂಡರ್‌ನ ತಾಂತ್ರಿಕ/ಆರ್ಥಿಕ ಮೌಲ್ಯಮಾಪನ ಮತ್ತು ದರ ಸಂಧಾನ ಸಮಿತಿ ಸಭೆಯ ನಡವಳಿಗಳು.

ಹಾಜರಿದ್ದ ಅಧಿಕಾರಿಗಳು:

1. ಶ್ರೀ ಗೌರವ್ ಗುಪ್ತ, ಭಾ.ಆ.ಸೇ, ಆಯುಕ್ತರು : ಅಧ್ಯಕ್ಷರು
2. ಶ್ರೀಮತಿ ತುಳಸಿ ಮದ್ದಿನೇನಿ, ಭಾ.ಆ.ಸೇ, ವಿಶೇಷ ಆಯುಕ್ತರು (ಹಣಕಾಸು) : ಸದಸ್ಯರು
3. ಶ್ರೀ ರಂದೀಪ್ ಡಿ, ಭಾ.ಆ.ಸೇ, ವಿಶೇಷ ಆಯುಕ್ತರು(ಘನತ್ಯಾಜ್ಯ) : ಸದಸ್ಯರು
4. ಶ್ರೀ ರೆಡ್ಡಿ ಶಂಕರ್ ಬಾಬು, ಐ.ಡಿ.ಇ.ಎಸ್, ವಲಯ ಆಯುಕ್ತರು(ರಾರಾನಗರ) : ಸದಸ್ಯರು
5. ಶ್ರೀ ಕೆ. ಸಿದ್ದೇಗೌಡ, ಪ್ರಧಾನ ಅಭಯಂತರರು : ಸದಸ್ಯರು
6. ಶ್ರೀ ರಾಜು, ಮುಖ್ಯ ಲೆಕ್ಕಾಧಿಕಾರಿಗಳು : ಸದಸ್ಯರು
7. ಶ್ರೀ ವಿಜಯ್ ಕುಮಾರ್ ಎನ್, ಮುಖ್ಯ ಅಭಯಂತರರು (ರಾರಾನಗರ ವಲಯ) : ಸದಸ್ಯ ಕಾರ್ಯದರ್ಶಿ

ಸಭೆಗೆ ಹಾಜರಿದ್ದ ಇತರೆ ಅಧಿಕಾರಿಗಳು

1. ಶ್ರೀ ಬಸವರಾಜು ಎನ್, ಕಾರ್ಯಪಾಲಕ ಅಭಯಂತರರು, ರಾರಾನಗರ ವಿಭಾಗ

ಆಯುಕ್ತರು ಹಾಗೂ ಅಧ್ಯಕ್ಷರು, ತಾಂತ್ರಿಕ ಮೌಲ್ಯಮಾಪನ/ಆರ್ಥಿಕ ಮೌಲ್ಯಮಾಪನ ಮತ್ತು ದರ ಸಂಧಾನ ಸಮಿತಿರವರು ಸಭೆಗೆ ಹಾಜರಾದ ಸಮಿತಿಯ ಸದಸ್ಯರನ್ನು ಹಾಗೂ ಇತರೆ ಅಧಿಕಾರಿಗಳನ್ನು ಸಭೆಗೆ ಆಹ್ವಾನಿಸಿ ಸಮಿತಿಯ ಸದಸ್ಯ ಕಾರ್ಯದರ್ಶಿರವರಿಗೆ ಕಾಮಗಾರಿಗಳ ಅನುಗುಣವಾಗಿ ವಿಷಯಗಳನ್ನು ಮಂಡಿಸಬೇಕೆಂದು ಸೂಚಿಸಿದರು.

ಮುಖ್ಯ ಅಭಯಂತರರು (ರಾಜರಾಜೇಶ್ವರಿನಗರ ವಲಯ) ಮತ್ತು ಸದಸ್ಯ ಕಾರ್ಯದರ್ಶಿರವರು, ರಾಜರಾಜೇಶ್ವರಿನಗರ ವಲಯಕ್ಕೆ ಸೇರಿದ ಕೆಳಕಂಡ ಕಾಮಗಾರಿಯ ಟೆಂಡರ್‌ನ ಆರ್ಥಿಕ ಬಿಡ್‌ನ ಆರ್ಥಿಕ ಮೌಲ್ಯಮಾಪನ ಮತ್ತು ದರ ಸಂಧಾನದ 01 ವಿಷಯ ಇರುವುದಾಗಿ ಸಭೆಗೆ ತಿಳಿಸಿ ಮಂಡಿಸಿದರು.

ವಿಷಯ ಸಂಖ್ಯೆ:-01

Name of the Work :-	Construction of Arch and Providing interlocking tiles infront of Saibaba Temple and Construction of RCC Roof for Ramp near Ganesha Temple in ward no 17 and Widening and Improvements to Road from BEL Circle to Mathikere Flyover.

ಕ್ರ. ಸಂ	ಸಂಕ್ಷಿಪ್ತ ವಿವರ	
1	ಅಂದಾಜು ಮೊತ್ತ	ರೂ. 300.00 ಲಕ್ಷಗಳು
2	ದರ ಪಟ್ಟಿ ಅಳವಡಿಕೆ	ಲೋಕೋಪಯೋಗಿ ಇಲಾಖೆಯ ಬೆಂಗಳೂರು ವೃತ್ತದ 2018-19ನೇ ಸಾಲಿನ ಚಾಲ್ತಿ ದರಗಳಿಗೆ

Scanned with CamScanner

ಕ್ರ. ಸಂ	ಸಂಕ್ಷಿಪ್ತ ವಿವರ	
3	ಲೆಕ್ಕ ಶೀರ್ಷಿಕೆ	ಪಿ – 3158 SIP Infrastructure Project Works
4	ಕರಡು ಟೆಂಡರ್ ಅನುಮೋದನೆ	ಮುಖ್ಯ ಅಭಿಯಂತರರು, ರಾಜರಾಜೇಶ್ವರಿನಗರ ವಲಯ
5	ಟೆಂಡರ್‌ಗಿಟ್ಟ ಮೊತ್ತ	ರೂ. 2,51,42,145.52
6	ಟೆಂಡರ್ ಪ್ರಕಟಣೆ ಸಂಖ್ಯೆ	No. RRND/EE/Tend/07/2020-21, Date: 18.12.2020
7	ದಿನ ಪತ್ರಿಕೆಗಳಲ್ಲಿ ಪ್ರಕಟಣೆ	ವಿಜಯವಾಣಿ ಮತ್ತು ಇಂಡಿಯನ್ ಎಕ್ಸ್‌ಪ್ರೆಸ್ ದಿನಾಂಕ: 20.12.2020
8	ಟೆಂಡರ್ ಸಲ್ಲಿಕೆ ಅಂತಿಮ ದಿನಾಂಕ	11.01.2021
9	ಟೆಂಡರ್ ಪದ್ಧತಿ	ದ್ವಿ ಲಕೋಟೆ ಪದ್ಧತಿ
10	ಉಪಯೋಗಿಸಿದ ಸ್ಟಾಂಡರ್ಡ್ ಬಿಡ್ ಡಾಕ್ಯುಮೆಂಟ್	KTPP Standard Bid Document KW-04
11	ಇ-ಪ್ರಕ್ಯೂರ್ ಮೆಂಟ್ ಇಂಡೆಂಟ್ ನಂ	BBMP/2020-21/OW/WORK_INDENT46185

2017-18 ನೇ ಸಾಲಿನಲ್ಲಿ ಬೆಂಗಳೂರಿಗೆ ವಿಶೇಷ ಮೂಲಭೂತ ಸೌಕರ್ಯಕ್ಕೆ ಬಂಡವಾಳ ಬೆಂಬಲ ಯೋಜನೆಯಡಿ ಒದಗಿಸಿರುವ ರೂ. 2491.00 ಕೋಟಿಗಳ ಅನುದಾನದಡಿಯಲ್ಲಿ ಸರ್ಕಾರದ ಆದೇಶ ಸಂಖ್ಯೆ: ನಅಇ 185 ಎಂಎನ್‌ವೈ 2017 ದಿನಾಂಕ: 26.12.2017 ರ **ಅನುಬಂಧ-4 ರ ಕ್ರಮಸಂಖ್ಯೆ 35** ರಲ್ಲಿ ಅನುಮೋದನೆಗೊಂಡಿರುವ Improvements to Footpath and drain in HMT Main Road from Major Sandeep Unnikrishnan road to Tumkur Road ಕಾಮಗಾರಿಗೆ ರೂ. 300.00 ಲಕ್ಷಗಳ ಅನುದಾನ ಒದಗಿಸಲಾಗಿರುತ್ತದೆ. ನಂತರ ಸರ್ಕಾರದ ಆದೇಶ ಸಂಖ್ಯೆ: ನಅಇ 16 ಎಂಎನ್‌ವೈ 2019 ಬೆಂಗಳೂರು ದಿನಾಂಕ: 04.06.2019 ರಲ್ಲಿ ಮೇಲ್ಕಂಡ ಕಾಮಗಾರಿಯ ಬದಲಾಗಿ (1) Construction of Arch and Providing interlocking tiles infront of Saibaba Temple and Construction of RCC Roof for Ramp near Ganesha Temple in ward no 17 (Est. Cost Rs. 200.00 Lakhs) ಹಾಗೂ (2) Widening and Improvements to Road from BEL Circle to Mathikere Flyover. (Est. Cost Rs.100.00 Lakhs) 2 ಬದಲೀ ಕಾಮಗಾರಿಗಳಿಗೆ ಅನುಮೋದನೆ ದೊರೆತಿರುತ್ತದೆ. ಸದರಿ 2 ಬದಲೀ ಕಾಮಗಾರಿಗಳನ್ನು ಒಗ್ಗೂಡಿಸಿ ಕೆಳಕಂಡಂತೆ **Construction of Arch and Providing interlocking tiles infront of Saibaba Temple and Construction of RCC Roof for Ramp near Ganesha Temple in ward no 17 and Widening and Improvements to Road from BEL Circle to Mathikere Flyover** (Est. Cost Rs. 300.00 Lakhs). ಪ್ಯಾಕೇಜ್ ಕಾಮಗಾರಿಯನ್ನಾಗಿ ಮಾಡಲಾಗಿರುತ್ತದೆ.

ಟೆಂಡರ್ ಪ್ರಕಟಣೆ ವಿವರವು ಮೇಲ್ಕಂಡ ಕೋಷ್ಟಕದಲ್ಲಿ ವಿವರಿಸಿರುವಂತಿದ್ದು, ದ್ವಿ-ಲಕೋಟೆ ತಾಂತ್ರಿಕ ಟೆಂಡರ್‌ನಲ್ಲಿ ಇಬ್ಬರು ಗುತ್ತಿಗೆದಾರರು ಭಾಗವಹಿಸಿದ್ದು, ಗುತ್ತಿಗೆದಾರರು ಸಲ್ಲಿಸಿರುವ ದಾಖಲೆಗಳನ್ವಯ ದಿನಾಂಕ: 30.03.2021 ರ ತಾಂತ್ರಿಕ ಮೌಲ್ಯಮಾಪನ/ಆರ್ಥಿಕ ಮೌಲ್ಯಮಾಪನ ಮತ್ತು ದರ ಸಂಧಾನ ಸಮಿತಿ ಸಭೆಯ ವಿಷಯ ಸಂಖ್ಯೆ: 01 ರ ತೀರ್ಮಾನದಂತೆ ಆರ್ಥಿಕ ಬಿಡ್‌ನ್ನು ದಿನಾಂಕ: 06.04.2021 ರಂದು ತೆರೆಯಲಾಗಿದ್ದು ವಿವರಗಳು ಈ ಕೆಳಕಂಡಂತಿರುತ್ತದೆ.

Scanned with CamScanner

ಕ್ರ ಸಂ	ತಾಂತ್ರಿಕ ಪರಿಶೀಲನೆಯಲ್ಲಿ ಅರ್ಹರಾದ ಗುತ್ತಿಗೆದಾರರು	ಟೆಂಡರ್‌ಗೆ ಮೊತ್ತ (2018-19ನೇ ಸಾಲಿನ ಲೋ.ಇ. ದರಪಟ್ಟಿ ದರಗಳಂತೆ (ರೂ. ಗಳಲ್ಲಿ)	ದಿನಾಂಕ 01.02.2021 ರ ಆದೇಶದ ಪರಿಷ್ಕೃತ ದರಗಳಂತೆ (ರೂ.ಗಳಲ್ಲಿ)	ಗುತ್ತಿಗೆದಾರರು ನಮೂದಿಸಿರುವ ಮೊತ್ತ. (ರೂ.ಗಳಲ್ಲಿ)	2018-19ನೇ ಸಾಲಿನ ಮಂಜೂರಾದ ದರಗಳಿಗೆ ಹೋಲಿಸಿದಾಗ ಕೆಳಕಡೆಯಾರು	ಪ್ರಸಕ್ತ 2018-19ನೇ ಸಾಲಿನ ಚಾಲ್ತಿ ಲೋ.ಇ ದರಪಟ್ಟಿಯ ದಿ: 01.02.2021 ರ ಆದೇಶದ ಪರಿಷ್ಕೃತ ದರಗಳಿಗೆ ಹೋಲಿಸಿದಾಗ	ಸರಾ
1	Sri B N Girish (S K S INFRASTRUCTURES PVT LTD)	2,51,42,145.52	2,54,07,008.29	2,87,02,834.89	ಶೇ. 14.16% ಹೆಚ್ಚು	ಶೇ. 12.97% ಹೆಚ್ಚು	L1
2	JAVALI CHANDRANNA PRAKASH (J C PRAKASH INFRASTRUCTURES PRIVATE LIMITED)			2,96,57,723.65	ಶೇ. 17.96% ಹೆಚ್ಚು	ಶೇ. 16.73% ಹೆಚ್ಚು	L2

ಎಲ್-1 ಬಿಡ್‌ದಾರರಾದ **ಶ್ರೀ. ಬಿ.ಎನ್. ಗಿರೀಶ್ (ಎಸ್.ಕೆ.ಎಸ್ ಇನ್‌ಫ್ರಾಸ್ಟ್ರಕ್ಚರ್ಸ್ ಪ್ರೈ ಲಿ)** ರವರು ನಮೂದಿಸಿರುವ ಮೊತ್ತ **ರೂ. 2,87,02,834.89** (ಶೇ. 12% ರಷ್ಟು ಜಿ.ಎಸ್.ಟಿ ತೆರಿಗೆ ಹೊರತುಪಡಿಸಿ) ಗಳನ್ನು ಮಂಜೂರಾದ ದರಗಳಿಗೆ ಹೋಲಿಸಿದಾಗ **ಶೇ. 14.16%** ರಷ್ಟು ಹೆಚ್ಚು ಮತ್ತು ಪ್ರಸಕ್ತ ಚಾಲ್ತಿ ದರಪಟ್ಟಿ 2018-19ನೇ ಸಾಲಿನ ಕರ್ನಾಟಕ ಲೋಕೋಪಯೋಗಿ ಇಲಾಖೆ, ಬೆಂಗಳೂರು ವೃತ್ತದ ದಿನಾಂಕ: 01.02.2021 ರ ಪರಿಷ್ಕೃತ (Issue Rates) ದರಗಳಿಗೆ ಹೋಲಿಸಿದಾಗ **ಶೇ. 12.97%** ರಷ್ಟು ಹೆಚ್ಚಿನ ದರಗಳಾಗಿರುತ್ತದೆ.

ಸದರಿ ದರಗಳು ಹೆಚ್ಚಾಗಿರುವುದು ಕಂಡು ಬಂದಿರುವುದರಿಂದ ಕಾರ್ಯಪಾಲಕ ಅಭಿಯಂತರರು, ರಾಜರಾಜೇಶ್ವರಿನಗರ ವಿಭಾಗರವರು ದರಸಂಧಾನ ನಡೆಸಲಾಗಿ ಎಲ್-1 ಬಿಡ್ಡುದಾರರಾದ **ಶ್ರೀ. ಬಿ.ಎನ್. ಗಿರೀಶ್ (ಎಸ್.ಕೆ.ಎಸ್ ಇನ್‌ಫ್ರಾಸ್ಟ್ರಕ್ಚರ್ಸ್ ಪ್ರೈ ಲಿ)** ರವರು ಕೂಲಿ, ಸಾಮಗ್ರಿ ಹಾಗೂ ಡೀಸೆಲ್ ದರಗಳು ಹೆಚ್ಚಾಗಿದ್ದು, ದರಸಂಧಾನದ ನಂತರ ಹಾಲಿ ನಮೂದಿಸಿರುವ **ರೂ. 2,87,02,834.89** (ಶೇ. 12% ರಷ್ಟು ಜಿ.ಎಸ್.ಟಿ ತೆರಿಗೆ ಹೊರತುಪಡಿಸಿ) ಬದಲಾಗಿ **ರೂ. 2,63,74,096/-** (ಶೇ. 12% ರಷ್ಟು ಜಿ.ಎಸ್.ಟಿ ತೆರಿಗೆ ಹೊರತುಪಡಿಸಿ) ಗಳಿಗೆ ಸಂಧಾನಿತ ದರ ಸಲ್ಲಿಸಿರುತ್ತಾರೆ. ಸದರಿ ಸಂಧಾನಿತ ದರ ಮೊತ್ತ **ರೂ. 2,63,74,096/-** (ಶೇ. 12% ರಷ್ಟು ಜಿ.ಎಸ್.ಟಿ ತೆರಿಗೆ ಹೊರತುಪಡಿಸಿ) ಗಳನ್ನು ಮಂಜೂರಾದ ದರಗಳಿಗೆ ಹೋಲಿಸಿದಾಗ **ಶೇ. 4.90%** ರಷ್ಟು ಹೆಚ್ಚು ಮತ್ತು ದಿನಾಂಕ: 01.02.2021 ರ ಪರಿಷ್ಕೃತ (Issue Rates) ದರಗಳಿಗೆ ಹೋಲಿಸಿದಾಗ **ಶೇ. 3.81%** ರಷ್ಟು ಹೆಚ್ಚುವರಿ ದರಗಳಾಗಿರುತ್ತವೆ. ಸದರಿ ಪ್ರಸ್ತಾವನೆಯನ್ನು ತಾಂತ್ರಿಕ/ಆರ್ಥಿಕ ಮೌಲ್ಯ ಮಾಪನ ಮತ್ತು ದರಸಂಧಾನ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

ತೀರ್ಮಾನ:-

ಎಲ್-1 ಬಿಡ್‌ದಾರರಾದ **ಶ್ರೀ. ಬಿ.ಎನ್. ಗಿರೀಶ್ (ಎಸ್.ಕೆ.ಎಸ್ ಇನ್‌ಫ್ರಾಸ್ಟ್ರಕ್ಚರ್ಸ್ ಪ್ರೈ ಲಿ)** ರವರು ನಮೂದಿಸಿರುವ ಮೊತ್ತ **ರೂ. 2,87,02,834.89** (ಶೇ. 12% ರಷ್ಟು ಜಿ.ಎಸ್.ಟಿ ತೆರಿಗೆ ಹೊರತುಪಡಿಸಿ) ಗಳನ್ನು ಮಂಜೂರಾದ ದರಗಳಿಗೆ ಹೋಲಿಸಿದಾಗ **ಶೇ. 14.16%** ರಷ್ಟು ಹೆಚ್ಚು ಮತ್ತು ಪ್ರಸಕ್ತ ಚಾಲ್ತಿ ದರಪಟ್ಟಿ - 01.02.2021 ರ ಪರಿಷ್ಕೃತ (Issue Rates) ದರಗಳಿಗೆ ಹೋಲಿಸಿದಾಗ **ಶೇ. 12.97%** ರಷ್ಟು ಹೆಚ್ಚಿನ ದರಗಳಾಗಿರುತ್ತದೆ.

Scanned with CamScanner

ಗುತ್ತಿಗೆದಾರರೊಂದಿಗೆ ದರಸಂಧಾನ ನಡೆಸಲಾಗಿ ಗುತ್ತಿಗೆದಾರರು ಹಾಲಿ ನಮೂದಿಸಿರುವ ರೂ.2,87,02,834.89 (ಶೇ. 12% ರಷ್ಟು ಜಿ.ಎಸ್.ಟಿ ತೆರಿಗೆ ಹೊರತುಪಡಿಸಿ) ಗಳ ಬದಲಾಗಿ ರೂ.2,63,74,096/- (ಶೇ. 12% ರಷ್ಟು ಜಿ.ಎಸ್.ಟಿ ತೆರಿಗೆ ಹೊರತುಪಡಿಸಿ) ಗಳಿಗೆ ಸಂಧಾನಿತ ದರ ಸಲ್ಲಿಸಿರುತ್ತಾರೆ. ಸದರಿ ಸಂಧಾನಿತ ದರ ಮೊತ್ತ ರೂ. 2,63,74,096/- (ಶೇ. 12% ರಷ್ಟು ಜಿ.ಎಸ್.ಟಿ ತೆರಿಗೆ ಹೊರತುಪಡಿಸಿ) ಗಳನ್ನು ಮಂಜೂರಾದ ದರಗಳಿಗೆ ಹೋಲಿಸಿದಾಗ ಶೇ. 4.90% ರಷ್ಟು ಹೆಚ್ಚು ಮತ್ತು ದಿನಾಂಕ: 01.02.2021 ರ ಪರಿಷ್ಕೃತ (Issue Rates) ದರಗಳಿಗೆ ಹೋಲಿಸಿದಾಗ ಶೇ. 3.81% ರಷ್ಟು ಹೆಚ್ಚಿನ ದರವಾಗಿದ್ದು, ಈ ಬಗ್ಗೆ ತೀರ್ಮಾನ ಕೈಗೊಳ್ಳಲು ಸರ್ಕಾರದ ಮಟ್ಟದಲ್ಲಿ ರಚಿತವಾಗಿರುವ ಅಧಿಕಾರಯುಕ್ತ ಸಮಿತಿಯ ಮುಂದೆ ಪ್ರಸ್ತಾವನೆಯ ಟಿಪ್ಪಣಿಯನ್ನು ಮಂಡಿಸುವುದು ಸೂಕ್ತವೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

ಮುಖ್ಯ ಅಭಿಯಂತರರು (ರಾ.ರಾ.ನ)
ಬಿ.ಬಿ.ಎಂ.ಪಿ
(ಸದಸ್ಯ ಕಾರ್ಯದರ್ಶಿ)

ಮುಖ್ಯ ಲೆಕ್ಕಾಧಿಕಾರಿಗಳು
ಬಿ.ಬಿ.ಎಂ.ಪಿ (ಸದಸ್ಯರು)

ಪ್ರಧಾನ ಅಭಿಯಂತರರು
ಬಿ.ಬಿ.ಎಂ.ಪಿ (ಸದಸ್ಯರು)

ವಿಶೇಷ ಆಯುಕ್ತರು (ಹಣಕಾಸು)
(ಸದಸ್ಯರು) ಬಿ.ಬಿ.ಎಂ.ಪಿ

ವಿಶೇಷ ಆಯುಕ್ತರು (ಘನತ್ಯಾಜ್ಯ)
(ಸದಸ್ಯರು) ಬಿ.ಬಿ.ಎಂ.ಪಿ

ವಲಯ ಆಯುಕ್ತರು (ರಾ.ರಾ.ನಗರ)
(ಸದಸ್ಯರು) ಬಿ.ಬಿ.ಎಂ.ಪಿ

ಮಾನ್ಯ ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
(ಅಧ್ಯಕ್ಷರು)

Scanned with CamScanner

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ದಿನಾಂಕ: 30/12/2021 ರಂದು 6.00 PM ಗಂಟೆಗೆ ಮಾನ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಅಧ್ಯಕ್ಷತೆಯಲ್ಲಿ ರಚಿಸಲಾಗಿರುವ ರಚಿತವಾಗಿರುವ ತಾಂತ್ರಿಕ ಮೌಲ್ಯಮಾಪನ ಸಮಿತಿಯ ಮುಂದೆ ಮುಖ್ಯ ಅಭಿಯಂತರರು, ರಾಜರಾಜೇಶ್ವರಿನಗರ ವಲಯಕ್ಕೆ ಸಂಬಂಧಿಸಿದಂತೆ ನಡೆದ ಸಮಿತಿ ಸಭೆಯ ನಡವಳಿಗಳು.

ಹಾಜರಿದ್ದ ಅಧಿಕಾರಿಗಳು:

1. ಮಾನ್ಯ ಆಯುಕ್ತರು	: ಅಧ್ಯಕ್ಷರು
2. ಮಾನ್ಯ ವಿಶೇಷ ಆಯುಕ್ತರು (ಯೋಜನೆ)	: ಉಪಾಧ್ಯಕ್ಷರು
3. ವಿಶೇಷ ಆಯುಕ್ತರು (ಘನತ್ಯಾಜ್ಯ)	: ಸದಸ್ಯರು
4. ವಿಶೇಷ ಆಯುಕ್ತರು (ಹಣಕಾಸು)	: ಸದಸ್ಯರು
5. ವಲಯ ಆಯುಕ್ತರು (ರಾರಾನ)	: ಸದಸ್ಯರು
6. ಪ್ರಧಾನ ಅಭಿಯಂತರರು	: ಸದಸ್ಯರು
7. ಮುಖ್ಯ ಲೆಕ್ಕಾಧಿಕಾರಿಗಳು	: ಸದಸ್ಯರು
8. ಮುಖ್ಯ ಅಭಿಯಂತರರು (ರಾರಾನ)	: ಸದಸ್ಯ ಕಾರ್ಯದರ್ಶಿ

ಪಾಲಿಕೆ ವ್ಯಾಪ್ತಿಯಲ್ಲಿ ಘನ ಸರ್ಕಾರದ 2016-17 ಮತ್ತು 2017-18 ನೇ ಸಾಲಿನ ಆಯವ್ಯಯದಲ್ಲಿ ನಗರೋತ್ಥಾನ ವಿಶೇಷ ಮೂಲಭೂತ ಸೌಕರ್ಯಕ್ಕೆ ಬಂಡವಾಳ ಬೆಂಬಲ ಮತ್ತು ಸರೋವರ ಅಭಿವೃದ್ಧಿ ಯೋಜನೆಯಡಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಡಿ ರೂ. 7300.00 ಕೋಟಿಗಳ ಸರ್ಕಾರದ ಅನುದಾನದಲ್ಲಿ ಕೈಗೊಳ್ಳುವ ಕಾಮಗಾರಿಗಳ ಕ್ರಿಯಾಯೋಜನೆಗೆ ಕೆಲವೊಂದು ಷರತ್ತುಗಳನ್ನು ವಿಧಿಸಿ ಅನುಮೋದನೆಯನ್ನು ನೀಡಲಾಗಿರುತ್ತದೆ.

2017-18ನೇ ಸಾಲಿನ ಆಯವ್ಯಯದಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ 2016-17 ಮತ್ತು 2017-18 ನೇ ಸಾಲಿನಲ್ಲಿ ಒದಗಿಸಿರುವ ರೂ. 7300.00 ಕೋಟಿಗಳನ್ನು ಮುಂದುವರೆಸುತ್ತಾ, 2017-18ನೇ ಸಾಲಿನ ಆಯವ್ಯಯದಲ್ಲಿ ರೂ. 2491.00 ಕೋಟಿ ಅನುದಾನ ಘೋಷಿಸಲಾಗಿರುತ್ತದೆ. ಸರ್ಕಾರದ ಆದೇಶ ಸಂಖ್ಯೆ : ನಅಇ 185 ಎಂಎನ್‌ವೈ 2017 ದಿನಾಂಕ: 26.12.2017 ರಂತೆ ಅನುಮೋದಿಸಿದ್ದ "ಮುಖ್ಯಮಂತ್ರಿಗಳ ನವ ಬೆಂಗಳೂರು" ಯೋಜನೆಯಡಿ ಅನುಮೋದನೆಯಾಗಿರುವ ಕಾಮಗಾರಿಯ ಬದಲಾಗಿ ಸರ್ಕಾರದ ಆದೇಶ ಸಂಖ್ಯೆ :ನಅಇ 16 ಎಂಎನ್‌ವೈ 2019 ಬೆಂಗಳೂರು, ದಿನಾಂಕ: 04.06.2019 ರಂತೆ ಅನುಬಂಧ-4 ರ ಕ್ರಮ ಸಂಖ್ಯೆ: 35 ರಲ್ಲಿ ಬದಲೀ ಕಾಮಗಾರಿಗಳು ಅನುಮೋದನೆಗೊಂಡಿರುತ್ತವೆ.

Scanned with CamScanner

ಈ ಮೇರೆಗೆ ಮುಖ್ಯ ಅಭಿಯಂತರರು, (ರಾ.ರಾ.ನ.) ವಲಯ ರವರು ಯೋಜನೆಯ ಕಾಮಗಾರಿ ಸಂಬಂಧಿಸಿದಂತೆ ಕಾರ್ಯಪಾಲಕ ಅಭಿಯಂತರರು, (ರಾ.ರಾ.ನಗರ) ರವರು ನೀಡಿರುವ ತಾಂತ್ರಿಕ ವರದಿಯನ್ನು ಕ್ರೋಢೀಕರಿಸಿ ಮೌಲ್ಯಮಾಪನಕ್ಕೆ ವಿಷಯ ಪಟ್ಟಿಯನ್ನು ತಯಾರಿಸಿ ಟೆಂಡರ್ ಮೌಲ್ಯಮಾಪನ ಸಮಿತಿ ಮುಂದೆ ತಾಂತ್ರಿಕ ಅನುಮೋದನೆಗೆ ಮಂಡಿಸಿರುತ್ತಾರೆ.

ಈ ವಿಷಯವಾಗಿ ಟೆಂಡರ್ ಮೌಲ್ಯಮಾಪನ ಸಮಿತಿಯು ಮೌಲ್ಯಮಾಪನಕ್ಕೆ ವಿಷಯ ಪಟ್ಟಿಯ ಯೋಜನೆಗಳ ತಾಂತ್ರಿಕ ಮೌಲ್ಯಮಾಪನಕ್ಕೆ ಸಂಬಂಧಿಸಿದಂತೆ ಈ ಕೆಳಕಂಡಂತೆ ಸಮಿತಿಯು ನಿರ್ಣಯ ಕೈಗೊಂಡಿರುತ್ತದೆ.

ಟೆಂಡರ್ ಮೌಲ್ಯಮಾಪನ ಸಮಿತಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ 2000ರಂತೆ ಹಾಗೂ ಇತ್ತೀಚೆಗೆ ಹೊರಡಿಸಿದ ಸರ್ಕಾರಿ ಆದೇಶಗಳನ್ನು ಗಣನೆಗೆ ತೆಗೆದುಕೊಳ್ಳಲಾಗಿದೆ.

1. ಗುತ್ತಿಗೆದಾರರ ವಾರ್ಷಿಕ ವಹಿವಾಟಿನ ಮೌಲ್ಯವನ್ನು Standard tender document KW-4 clause -3.2 (a) ಗೆ ಅನ್ವಯ ಟೆಂಡರ್ ಆಹ್ವಾನಿಸಿರುವ ಸಾಲಿಗೆ ಸಮೀಕರಿಸುವ ಸಲುವಾಗಿ ವಾರ್ಷಿಕ 10% Weight age ನೀಡಲಾಗಿರುತ್ತದೆ.
2. ಸರ್ಕಾರದ ಆದೇಶ ಸಂಖ್ಯೆ: No.FD 480 Exp-12/2014, Bangalore date: 19-07-2014 Standard tender document KW-4 clause -3.2 (b) ಗೆ ಸಂಬಂಧಿಸಿದಂತೆ ಸಮಾನ ರೂಪದ ಕಾಮಗಾರಿಯ ಮೊತ್ತ ಟೆಂಡರ್‌ಗಿಟ್ಟ ಮೊತ್ತದ ಶೇ.50 ರಷ್ಟು ಎಂದು ಪರಿಗಣಿಸಲಾಗಿದೆ.
3. Standard tender document clause -15.2 ಮತ್ತು 3.2 (c) ಪರಿಗಣಿಸಲಾಗಿದೆ.

<u>ವಿಷಯ-01 :-</u>

ಅನುಮೋದನೆಗೊಂಡಿರುವ ಕಾಮಗಾರಿಯ ಟೆಂಡರ್ ಕರೆಯಲಾಗಿದ್ದು, ಸದರಿ ಟೆಂಡರ್ ಪ್ರಕ್ರಿಯೆಯ ಮುಖ್ಯಾಂಶಗಳು ಈ ಕೆಳಕಂಡಂತಿವೆ.

SL No	Name of Work	Job Certificate	Amount (Rs. In Lakhs)
1	Construction of Arch and Providing interlocking tiles infront of Saibaba Temple and Construction of RCC Roof for Ramp near Ganesha Temple in ward no 17 and Widening and Improvements to Road from BEL Circle to Mathikere Flyover.	017-20-000003 & 017-20-000004	300.00
		TOTAL	**300.00**

Scanned with CamScanner

ಕ್ರ.ಸಂ	ಸಂಕ್ಷಿಪ್ತ ವಿವರ		ದಿನಾಂಕ
1	ಅಂದಾಜು ಮೊತ್ತ	ರೂ. 300.00 ಲಕ್ಷಗಳು	–
2	ದರಪಟ್ಟಿ ಅಳವಡಿಕೆ	ಕ.ಲೋ ಇಲಾಖೆಯ 2018-19 ಸಾಲಿನ ದರಪಟ್ಟಿ ದರಗಳು.	–
3	Job-code ಸಂಖ್ಯೆ	017-20-000003 & 017-20-000004	–
4	ಲೆಕ್ಕ ಶೀರ್ಷಿಕೆ	P-3158	–
5	ಆಡಳಿತಾತ್ಮಕ ಮಂಜೂರಾತಿ	ಆಡಳಿತಾತ್ಮಕ ಅನುಮೋದನೆ ನಿರೀಕ್ಷಿಸಿ	–
6	ತಾಂತ್ರಿಕ ಮಂಜೂರಾತಿ	CE/RRNZ/TS/285/2020-21	10.12.2020
7	ಕರಡು ಟೆಂಡರ್ ಅನುಮೋದನೆ	ಆಗಿರುತ್ತದೆ.	17.12.2020
8	ಟೆಂಡರ್‌ಗೆ ಇಟ್ಟ ಮೊತ್ತ	ರೂ. 251.51 ಲಕ್ಷಗಳು	–
9	ಟೆಂಡರ್ ಪ್ರಕಟಣೆ ಸಂಖ್ಯೆ	RRND/EE/Tend/07/2020-21	18.12.2020
10	ದಿನಪತ್ರಿಕೆಗಳಲ್ಲಿ ಪ್ರಕಟಣೆ	ವಿಜಯವಾಣಿ ಹಾಗೂ ಇಂಡಿಯನ್ ಎಕ್ಸ್‌ಪ್ರೆಸ್	20.12.2020
11	ಟೆಂಡರ್ ಸಲ್ಲಿಕೆ ಅಂತಿಮ ದಿನಾಂಕ	–	11.01.2021
12	ಟೆಂಡರ್ ಪದ್ಧತಿ	ಟ್ವಿ ಲಕೋಟೆ ಪದ್ಧತಿ	–
13	ಉಪಯೋಗಿಸಿದ Standard Bid Document	KTTP Standard Bid Document KW-04	–
14	e – Procurement Indent No.	BBMP/2020-21/OW/WORK_INDENT 46185	–

ಸದರಿ ಟೆಂಡರ್‌ನ ತಾಂತ್ರಿಕ ಬಿಡ್‌ನ್ನು ದಿನಾಂಕ: 13.01.2021 ರಂದು ತೆರೆಯಲಾಗಿದ್ದು ಈ ಕೆಳಕಂಡ ಇಬ್ಬರು ಬಿಡ್ಡುದಾರರು ಭಾಗವಹಿಸಿರುತ್ತಾರೆ.

1. Sri. B N Girish (S K S INFRASTRUCTURES PVT LTD)
2. Sri. JAVALI CHANDRANNA PRAKASH (J.C.PRAKASH INFRASTRUCTURES PRIVATE LIMITED)

ಸದರಿ ಯೋಜನೆಯ ಟೆಂಡರ್‌ನಲ್ಲಿ ಇಬ್ಬರು ಬಿಡ್ಡುದಾರರು ಭಾಗವಹಿಸಿದ್ದು ಅದರಲ್ಲಿ ಇಬ್ಬರು ಬಿಡ್ಡುದಾರರು ತಾಂತ್ರಿಕವಾಗಿ ಅರ್ಹರಾಗಿರುತ್ತಾರೆಂದು ಮುಖ್ಯ ಅಭಿಯಂತರರು (ರಾಜರಾಜೇಶ್ವರಿನಗರ ವಲಯ) ರವರು ಶಿಫಾರಸ್ಸು ಮಾಡಿರುತ್ತಾರೆ.

<u>ನಿರ್ಣಯ:</u> ಸದರಿ ಯೋಜನೆಯ ಟೆಂಡರ್‌ನಲ್ಲಿ ಭಾಗವಹಿಸಿರುವ ಬಿಡ್ಡುದಾರರ ಪೈಕಿ 1) Sri. B N Girish (S K S INFRASTRUCTURES PVT LTD) ಹಾಗೂ 2) Sri. JAVALI CHANDRANNA PRAKASH (J.C.PRAKASH INFRASTRUCTURES PRIVATE LIMITED) ಬಿಡ್ಡುದಾರರು

Scanned with CamScanner

ತಾಂತ್ರಿಕವಾಗಿ ಅರ್ಹರಾಗಿರುತ್ತಾರೆ ಎಂದು ಸಭೆಯು ನಿರ್ಣಯಿಸಿರುತ್ತದೆ. ಸದರಿ ಬಿಡ್ದುದಾರರು ಸಲ್ಲಿಸಿದ್ದ ದಾಖಲೆಗಳನ್ನು ಪರಿಶೀಲಿಸಿ ಟೆಂಡರ್ ತಾಂತ್ರಿಕ ಷರತ್ತುಗಳಿಗೆ ಅನುಗುಣವಾಗಿ ಮೌಲ್ಯಮಾಪನ ಮಾಡಲಾಗಿದ್ದು, ತಾಂತ್ರಿಕ ಬಿಡ್ನ್ನು ಅಂಗೀಕರಿಸಿ ಆರ್ಥಿಕ ಬಿಡ್ನ್ನು ತೆರೆಯಲು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

ಮುಖ್ಯ ಅಭಿಯಂತರರು (ರಾ.ರಾ.ಸ)
ಬಿ.ಬಿ.ಎಂ.ಪಿ
(ಸದಸ್ಯ ಕಾರ್ಯದರ್ಶಿ)

ಮುಖ್ಯ ಲೆಕ್ಕಾಧಿಕಾರಿಗಳು
ಬಿ.ಬಿ.ಎಂ.ಪಿ (ಸದಸ್ಯರು)

ಪ್ರಧಾನ ಅಭಿಯಂತರರು 30/3/2021
ಬಿ.ಬಿ.ಎಂ.ಪಿ (ಸದಸ್ಯರು)

ವಿಶೇಷ ಆಯುಕ್ತರು (ಪಣಕಾಸು)
(ಸದಸ್ಯರು) ಬಿ.ಬಿ.ಎಂ.ಪಿ

ವಿಶೇಷ ಆಯುಕ್ತರು (ಘನತ್ಯಾಜ್ಯ)
(ಸದಸ್ಯರು) ಬಿ.ಬಿ.ಎಂ.ಪಿ

ವಲಯ ಆಯುಕ್ತರು (ಶಾರಾನ)
(ಸದಸ್ಯರು) ಬಿ.ಬಿ.ಎಂ.ಪಿ

ವಿಶೇಷ ಆಯುಕ್ತರು (ಯೋಜನೆ)
(ಉಪಾಧ್ಯಕ್ಷರು), ಬಿ.ಬಿ.ಎಂ.ಪಿ

ಮಾನ್ಯ ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
(ಅಧ್ಯಕ್ಷರು)

Scanned with CamScanner